ದಿಃ 5.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಚ್.ವಿ.ಯ್ಯು. ವಕೀಲರಿಂದ ,**

1. ಮೃತ ನನ್ನ ಗಂಡ ಕೆ.ಇ.ಬಿ. ನಲ್ಲಿ ಸೂಪರ್ವೈಸರ್ ಆಗಿದ್ದರು. ನನ್ನ ಗಂಡ 2016 ರಲ್ಲಿ ಸೇವೆಯಿಂದ ನಿವೃತ್ತಿ ಆಗಿದ್ದರು ಆ ಸಮಯ ಅವರು ಶೃಂಗೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ನಾನು ನನ್ನ ಗಂಡನಿಗೆ 2 ನೇ ಹೆಂಡತಿ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 3 ಜನ ಸಹೋದರರು ಹಾಗೂ ಇಬ್ಬರು ಸಹೋದರಿಯರು. ನನ್ನ ಮಾವ ಖಾಸಿಂ ಸಾಬ್ ರವರಿಗೆ ಒಟ್ಟು 6 ಎಕರೆ ಜಮೀನು ಇತ್ತು. ಅವು ನೀರಾವರಿ ಜಮೀನು ಆಗಿತ್ತು. ಅವುಗಳನ್ನು ಸುಮಾರು 1977 – 1978 ರಲ್ಲಿ ಹಂಚಿಕೆ ಮಾಡಿಕೊಂಡಿರುತ್ತಾರೆ. ಅದರಂತೆ ಕಂದಾಯ ದಾಖಲೆಗಳು ಬದಲಾಗಿರುತ್ತವೆ. ಸದರಿ ವಿಭಾಗದಲ್ಲಿ ನನ್ನ ಗಂಡನಿಗೆ 2 ಎಕರೆ ಜಮೀನು ಬಂದಿತ್ತು. ಆ ಪೈಕಿ 1 ಎಕರೆ ಜಮೀನನ್ನು ಪ್ರತಿವಾದಿಯು ನನ್ನ ಗಂಡನಿಗೆ ತಿಳಿಯದ ಹಾಗೇ ಬರೆಸಿಕೊಂಡಿರುತ್ತಾರೆ. ನನ್ನ ಗಂಡನಿಗೆ ಓದಲು, ಬರೆಯಲು ಬರುತ್ತಿರಲಿಲ್ಲ. ಆತ ಕನ್ನಡ ಭಾಷೆಯಲ್ಲಿ 3 ನೇ ತರಗತಿ ವ್ಯಾಸಾಂಗ ಮಾಡಿದ್ದರು.

2. ದಾವಾ ಸ್ವತ್ತಿನ ಖಾತೆ ಪ್ರತಿವಾದಿ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಂಗತಿ ಈ ದಾವೆ ಹೂಡಿದ ನಂತರ ನನಗೆ ತಿಳಿದಿರುತ್ತದೆ. ನಾನು ವಾಸ ಇರುವ ಮನೆ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ವಾಸದ ಮನೆಗೆ 1974 ರಲ್ಲಿ ನನ್ನ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಪಡೆದಿರುತ್ತೇನೆ. ಆ ಸಂಬಂಧ ನಾನು ವಿದ್ಯುತ್ ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಬಲ್ಲೆ ಎಂದು ನುಡಿಯುತ್ತಾರೆ. ವಿದ್ಯುತ್ ಸಂಪರ್ಕ ಪಡೆಯಲು ನಾನು ಏನು ದಾಖಲೆ ಸಲ್ಲಿಸಿದ್ದೆನು ಈಗ ನನಗೆ ನೆನಪಿಲ್ಲ. ಸದರಿ ಸ್ವತ್ತಿಗೆ ನಾನು ನೀರಿನ ಸಂಪರ್ಕ ಪಡೆದಿರುತ್ತೇನೆ. ದಾವಾ ಸ್ವತ್ತು ಮೊದಲು ಹಿರಿಯೂರು ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಇತ್ತು ಎಂದರೆ ಸರಿ. ದಾವಾ ಸ್ವತ್ತಿನ ಖಾತೆ ಸದರಿ ಮಂಡಲ ಪಂಚಾಯತಿಯಲ್ಲಿ 1970 -1971

ರಿಂದ ಪ್ರತಿವಾದಿಯ ಹೆಸರಿಗೆ ಇತ್ತು ಎಂದರೆ ಸರಿ. ಸದರಿ ದಾಖಲೆಗಳಲ್ಲಿ ದಾವಾ ಸ್ವತ್ತು ನನ್ನ ಮಾವನಿಗೆ ಸೇರಿದ್ದು ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ.

3. ನಂತರ ದಾವಾ ಸ್ವತ್ತು ಭದ್ರಾವತಿ ನಗರಸಭೆ ವ್ಯಾಪ್ತಿಗೆ ಸೇರಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿಗೆ ನಾನು ಯಾವುದೇ ಕಂದಾಯ ಪಾವತಿಸಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ಕಂದಾಯ ಪಾವತಿಸುವುದಾಗಿ ತಿಳಿಸಿ ನನ್ನಿಂದ ರೂ. 20,000/- ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಪ್ರತಿವಾದಿಯೇ ಕಂದಾಯ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿನ 'ಇ' ಸ್ವತ್ತು ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ದಿಃ 12-07-1974 ರಂದು ನನ್ನ ಗಂಡ ಪ್ರತಿವಾದಿಯಿಂದ ಹಣ ಪಡೆದು ಆತನಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಅನುಮತಿ ಮೇರೆಗೆ ನಾವು ಆತನ ಮನೆಯಲ್ಲಿ ವಾಸ ಇರುತ್ತೇವೆ ಎಂದರೆ ಸರಿಯಲ್ಲ. ನಿಜಸಂಗತಿಗಳು ನನಗೆ ತಿಳಿದಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**